ಆ) ೧೯೭೧ರಲ್ಲಿ ನಿರ್ಮಾಣವಾದ ಸಾಸ್ವಾನ ಕೋಡಿ ರಸ್ತೆ ಅರ್ಧದಲ್ಲೇ ನಿಲ್ಲಲು ಕಾರಣವೇನು ? ಆ ರಸ್ತೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಇ) ಸಾಸ್ವಾನ ಕೋಡಿ ರಸ್ತೆಯಲ್ಲಿರುವ ಹೊಳೆಗೆ ಸೇತುವೆ ರಚನೆ ಯಾವಾಗ ಆಗುತ್ತದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಿಸಲಾಗಿದ್ದ ೩೨ ಮೀನುಗಾರಿಕೆ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ಪಶಕ್ಕೆ ದುರಸ್ತಿ ಮತ್ತು ನಿರ್ವಹಣೆಗೆ ಸರ್ಕಾರಿ ಆಜ್ಞೆಗಳ ಪ್ರಕಾರ ತೆಗೆದು ಕೊಂಡಿದೆ

ಆ) ಸಾಸ್ವಾನ ಕೋಡಿ ರಸ್ತೆಯನ್ನು ಕೋಡಿ ಹೊಳೆಯವರೆವಿಗೂ ಮಾಡಿ ಮುಗಿಸಲಾಗಿದೆ. (೨.೪ ಕಿ.ಮೀ.ಉದ್ದ)

ಇ) ಕೋಡಿ ಹೊಳೆಗೆ ಸೇತುವೆ ನಿರ್ಮಿಸಿ ಹೊಳೆಯ ಪಶ್ಚಿಮ ದಂಡೆಯಿಂದ ಈ ರಸ್ತೆಯನ್ನು ೦.೬೦ ಕಿ.ಮೀ. ಪರೆಗೆ ಮುಂದವರಿಸಿದಲ್ಲಿ ಸಮುದ್ರದ ಕಿನಾರಗೆ ಸಮಾನಾಂತರವಾಗಿ ಎ.ಎಸ್.ಪಿ. ಯೋಜನೆಯಲ್ಲಿ ರಚಿಸುವ ಮಣೂರು ಕೋಡಿ ರಸ್ತೆಯನ್ನು ಸೇರುತ್ತದೆ. ಸೇತುವೆ ಮತ್ತು ಕೂಡು ರಸ್ತೆಯ ನಿರ್ಮಾಣಕ್ಕೆ ಸುಮಾರು ೨೫ ಲಕ್ಷ ರೂ.ಗಳಿಗಿಂತ ಹೆಚ್ಚು ಬೇಕಾಗುತ್ತದೆ. ಪಣದ ಲಭ್ಯತೆಗೆ ಅನುಗುಣವಾಗಿ ಈ ಕೆಲಸವನ್ನು ಮುಂಬರುವ ವರ್ಷಗಳಲ್ಲಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ರಾಜ್ಯದ ಹಳ್ಳಿಗಳಲ್ಲಿರುವ ಶಾಲೆಗಳ ಬಗ್ಗೆ

೧೫೨ (೫೪೪) ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿರುವ ಹಳ್ಳಿಗಳ ಸಂಖ್ಯೆ ಎಷ್ಟು (ಆಸಲಿ ಮತ್ತು ಮಜರಾ) ಹಾಗೂ ಎಷ್ಟು ಹಳ್ಳಿಗಳಲ್ಲಿ ಪಾಠಶಾಲೆಗಳಿವೆ ?

ಆ) ರಾಜ್ಯದಲ್ಲಿರುವ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಪ್ರಾಥಮಿಕ ಮಾಧ್ಯಮಿಕ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು ?

ಇ) ಈ ಶಾಲೆಗಳಿಗೆ ಕಟ್ಟಡಗಳನ್ನು ಒದಗಿಸಬೇಕಾದರೆ ಬೇಕಾಗುವ ಹಣದ ಮೊತ್ತವೆಷ್ಟು ? ಕಳೆದ ಮೂರು ವರ್ಷಗಳಲ್ಲಿ ಕಟ್ಟಡಗಳಿಗಾಗಿ ಖರ್ಚು ಮಾಡಿರುವ ಹಣವೆಷ್ಟು ಕಟ್ಟಡಗಳಿಲ್ಲದೆ ಇರುವ ಜಿಲ್ಲಾ ಶಾಲೆಗಳಿಗೂ ಕಟ್ಟಡಗಳನ್ನು ಒದಗಿಸುವ ಯೋಜನೆ ಏನಾದರೂ ಸರ್ಕಾರದಲ್ಲಿದೆಯೇ ಹಾಗಿದ್ದಲ್ಲಿ ಎಷ್ಟು ವರ್ಷಗಳಲ್ಲಿ ಕಟ್ಟಡಗಳನ್ನು ಎಲ್ಲಾ ಶಾಲೆಗಳಿಗೂ ಒದಗಿಸಲಾಗುವುದು ?

ಈ) ೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲು ಮತ್ತು ಹಳೆ ಕಟ್ಟಡಗಳ ದುರಸ್ತಿಗಾಗಿ ಒದಗಿಸಲಾಗಿರುವ ಹಣವೆಷ್ಟು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ರಾಜ್ಯದಲ್ಲಿ ೩೦೦ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಹಳ್ಳಿಗಳ ಸಂಖ್ಯೆ ೨೨೬೭೭

ಪಾಠಶಾಲೆಗಳು ಇರುವ ಹಳ್ಳಿಗಳ ಸಂಖ್ಯೆ : ೨೨೦೨೬

ಆ)

	ಪಟ್ಟಣ ಪ್ರದೇಶ	ಗ್ರಾಮಾಂತರ ಪ್ರದೇಶ
ಪ್ರಾಥಮಿಕ ಶಾಲೆಗಳು	೪೪೩೭	೨೦೪೬೪
ಮಾಧ್ಯಮಿಕ ಶಾಲೆಗಳು	೩೨೨೪	೮೭೯೮
ಪ್ರೌಢ ಶಾಲೆಗಳು	೭೯೨	೬೧೮

ಈ ಶಾಲೆಗಳಲ್ಲಿ ತನ್ನದೆ ಆದ ಕಟ್ಟಡಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ :

	ತನ್ನದೆ ಆದ ಕಟ್ಟಡಗಳನ್ನು ಹೊಂದಿರುವ ಶಾಲೆಗಳ ಸಂಖ್ಯೆ	ಕಟ್ಟಡವಿಲ್ಲದೆ ಇರುವ ಶಾಲೆಗಳ ಸಂಖ್ಯೆ ಬಯಲಿನ ಹಾಗೂ ಬಾಡಿಗೆ ಕಟ್ಟಡಗಳ ಸಂಖ್ಯೆ
ಪ್ರಾಥಮಿಕ/ಮಾಧ್ಯಮಿಕ ಶಾಲೆಗಳು	೩೧೫೬೮	೫೩೫೫ (೩೧೦೭) + ೨೨೪೮
ಪ್ರೌಢ ಶಾಲೆಗಳು	೭೦೯	೭೧೧

೧) ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು — ಸುಮಾರು ೨೫ ಕೋಟಿ ರೂಪಾಯಿಗಳು
ಪ್ರೌಢ ಶಾಲೆಗಳು — ೪೨೬.೬ ಲಕ್ಷಗಳು

	೧೯೮೫-೮೪	೧೯೮೪-೮೫	೧೯೮೫-೮೬
ಪ್ರಾಥಮಿಕ/ಮಾಧ್ಯಮಿಕ ಶಾಲೆಗಳು	೮೧.೪೫ ಲಕ್ಷ	೧೪೫.೨೨ ಲಕ್ಷ	ಹಣ ಒದಗಿಸಿಲ್ಲ
ಪ್ರೌಢ ಶಾಲೆಗಳು	೧೦ ಲಕ್ಷ	೧೮ ಲಕ್ಷ	೧೧.೯೩ ಲಕ್ಷ

ಎಲ್ಲಾ ಶಾಲೆಗಳಿಗೂ ಕಟ್ಟಡಗಳನ್ನು ಒದಗಿಸುವ ಬಗ್ಗೆ ಸರ್ಕಾರದ ಯೋಜನೆಯಲ್ಲಿದೆ. ಹಂತ ಹಂತದಲ್ಲಿ ಶಾಲೆಗಳಿಗೆ ಕಟ್ಟಡವನ್ನು ಒದಗಿಸಲಾಗುವುದು.

ಈ)

	ಕಟ್ಟಡ ನಿರ್ಮಿಸಲು	ದುರಸ್ತಿಗಾಗಿ
ಪ್ರಾಥಮಿಕ/ಮಾಧ್ಯಮಿಕ ಶಾಲೆಗಳು	೬೫.೭೬ ಲಕ್ಷ	೧೦೦.೨೫ ಲಕ್ಷ
ಪ್ರೌಢ ಶಾಲೆಗಳು	೬೫.೬೮ ಲಕ್ಷ	ಮಂಜೂರು ಮಾಡಿಲ್ಲ

ಕೋಲಾರ ಜಿಲ್ಲೆಯಲ್ಲಿ ಕೈಕೊಂಡ ಬರ ಪರಿಹಾರ ಕಾಮಗಾರಿಗಳು

೧೫೫. (೪೦೦) ಶ್ರೀ ಸಿ..ಬೈರೇಗೌಡ (ವೇಮಗಲ್).—ಮಾನ್ಯ ಲೋಕೋಪಯೋಗಿ ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಸದಾ ಬರಗಾಲ ಪೀಡಿತ ಕೋಲಾರ ಜಿಲ್ಲೆಗೆ ಸರ್ಕಾರದವರು ಹಾಕಿಕೊಂಡಿರುವ ಶಾಶ್ವತವಾದ ಬರ ಪರಿಹಾರ ಯೋಜನೆಗಳು ಯಾವುವು ?

ಆ) ಭದ್ರಾ ಮೇಲ್ದಂಡೆ ಯೋಜನೆಯಿಂದ ಕೋಲಾರ ಜಿಲ್ಲೆಗೆ ನೀರನ್ನು ಒದಗಿಸಬೇಕೆಂಬ ಬೇಡಿಕೆ ಇರುವುದು ನಿಜವೇ ?

ಇ) ಈ ಯೋಜನೆಗಾಗಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರುವ ಹಣವೆಷ್ಟು ?

ಈ) ಈ ಯೋಜನೆಯನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಕೇಂದ್ರ ಸರ್ಕಾರದಿಂದ ಸೂಚನೆ ಏನಾದರೂ ಬಂದಿದೆಯೇ ?

ಉ) ಈ ಯೋಜನೆಗೆ ತಗಲುವ ಖರ್ಚು ಎಷ್ಟು ಮತ್ತು ಈ ಯೋಜನೆಯನ್ನು ಯಾವಾಗ ಕಾರ್ಯಗತ ಮಾಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೋಲಾರ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳ ಪ್ರಸ್ತಾವನೆಗಳು ಯಾವುವೂ ಇಲ್ಲ. ತಾಂತ್ರಿಕ ಮತ್ತು ಆರ್ಥಿಕವಾಗಿ ಯೋಗ್ಯವಾದ ಸಣ್ಣ ನೀರಾವರಿ ಕೆರೆಗಳನ್ನು ಲಭ್ಯವಿರುವ ಅನುದಾನದ ಪರಿಮಿತಿಯಲ್ಲಿ ವರ್ಷೇ ವರ್ಷೇ ತೆಗೆದುಕೊಳ್ಳಲಾಗುತ್ತಿದೆ.

ಆ) ನಿಜ.